**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್.ಸಿ.ನಂ. 193/2019**

**ಸಿ.ಡಬ್ಲ್ಯೂಃ–5 ಪಿ.ಡಬ್ಲ್ಯೂಃ–7**

**ದಿಃ 28.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

| | | |
|---|---|---|
| ಪೂರ್ಣ ಹೆಸರು | : | ಲಕ್ಷ್ಮಣ ಬಾಳಪ್ಪಾ ಕಬ್ಬೂರೆ |
| ವಯಸ್ಸು | : | 60 ವರ್ಷ. |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಬಸ್ತವಾಡ |

**ಮುಖ್ಯ ವಿಚಾರಣೆಃ–** ಮಾನ್ಯ ಸರಕಾರಿ ಅಭಿಯೋಜಕರವರಿಂದಃ–

1) ಚಾ.ಸಾ.4 ಗೊತ್ತಿಲ್ಲ. ಆರೋಪಿಯನ್ನು ಈ ಮೊದಲು ನೋಡಿಲ್ಲ.

2) ಈಗ್ಗೆ 4–5 ವರ್ಷಗಳ ಹಿಂದೆ ಹಾರೂಗೇರಿ ಪೋಲಿಸ ಠಾಣೆಯಲ್ಲಿ ಒಂದು ದಾಖಲೆಯ ಮೇಲೆ ನನ್ನ ಹೆಬ್ಬೆಟ್ಟು ಪಡೆದಿದ್ದಾರೆ. ಅಲ್ಲಿಂದ ಎಲ್ಲಿಗೂ ಕರೆದುಕೊಂಡು ಹೋಗಿಲ್ಲ. 2ನೇ ಆರೋಪಿ ಶ್ರೀಗಂಧದ ಗಿಡ ಕಡಿದ ಸ್ಥಳ ಅಂತಾ ಯಾವುದೇ ಸ್ಥಳ ತೋರಿಸಿಲ್ಲ. ಅಲ್ಲಿ ಛಾಯಾಚಿತ್ರ ತೆಗೆದಿಲ್ಲ.

3) ಸಾಕ್ಷಿಗೆ 2ನೇ ಆರೋಪಿ ತೋರಿಸಿದ ಸ್ಥಳ ಪಂಚನಾಮೆ ಮೇಲಿನ ತನ್ನ ಹೆಬ್ಬೆಟ್ಟು ತೋರಿಸಲಾಗಿ ನೋಡಿ ಒಪ್ಪಿಕೊಂಡಿದ್ದು, ಪಂಚನಾಮೆಯನ್ನು

ನಿ.ಪಿ.7 ಎಂದು ಗುರುತಿಸಲಾಯಿತು. ಅದರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ಪೋಲೀಸರು ಹೆಬ್ಬೆಟ್ಟು ಹಾಕು ಎಂದಿದ್ದರಿಂದ ಹಾಕಿದ್ದೇನೆ.

4) ಸಾಕ್ಷಿಗೆ 02 ಛಾಯಾಚಿತ್ರಗಳನ್ನು ತೋರಿಸಲಾಗಿ, ಅದರಲ್ಲಿ ತನ್ನ ಭಾವಚಿತ್ರ ನೋಡಿ ಗುರುತಿಸಿರುತ್ತಾರೆ, ಅವುಗಳನ್ನು ಯಾರು, ಎಲ್ಲಿ ಹಾಗೂ ಯಾವ ವಿಚಾರವಾಗಿ ತೆಗೆದಿದ್ದಾರೆಂದು ಗೊತ್ತಿಲ್ಲ. ಸದರಿ ಛಾಯಾಚಿತ್ರಗಳನ್ನು ಸಾಂಕೇತಿಕವಾಗಿ ನಿ.ಪಿ.8, 9 ಅಂತಾ ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ್ದು, ಪರಿಶೀಲಿಸಿ, ಅನುಮತಿಸಲಾಯಿತು)**

**ಪಾಟೀ ಸವಾಲುಃ– ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

1) ದಿನಾಂಕಃ 17.06.2018 ರಂದು ಸಂಜೆ 05.30 ರಿಂದ 06.30 ಗಂಟೆ ಸಮಯದಲ್ಲಿ ಹಾರೂಗೇರಿ ಪೋಲಿಸ ಠಾಣೆಯಿಂದ 2ನೇ ಆರೋಪಿ ಹೇಳಿಕೆ ಪ್ರಕಾರ ಖಣದಾಳ ಗ್ರಾಮದ ಆತನ ಜಮೀನಿನ ಬಾಜು ಇರುವ ಖಾಲಿ ಜಾಗಾಕ್ಕೆ ಹೋಗಿ, ಅಲ್ಲಿ ಕಡಿದ ಶ್ರೀಗಂಧದ ಗಿಡದ ಸ್ಥಳವನ್ನು ಪರಿಶೀಲನೆ ಮಾಡಿ, ನಿ.ಪಿ.7 ರಂತೆ ಪಂಚನಾಮೆ ತಯಾರಿಸಿ ಓದಿ ಹೇಳಿ ಹೆಬ್ಬೆಟ್ಟು ಪಡೆದರು ಎಂದರೆ ಸರಿಯಲ್ಲ. ಅದೇ ಕಾಲಕ್ಕೆ ನನಗೀಗ ತೋರಿಸಿದ

ನಿ.ಪಿ.8, 9 ಛಾಯಾಚಿತ್ರಗಳನ್ನು ತೆಗೆಯಲಾಯಿತು ಎಂದರೆ ಸರಿಯಲ್ಲ.

2. ಸದರಿ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಕೂಡ ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ– ಆರೋಪಿತರ ಪರ ಏನೂ ಇಲ್ಲ.**

**ಮರು ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.